ಸಂಪಾದಕೀಯ

# ಆದರ್ಶ ಗೃಹಿಣಿ ಶ್ರೀಮಾತೆ

## ಕುಟುಂಬದ ಪ್ರಾಮುಖ್ಯ

ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

**ದುಷ್ಟಾ ಭಾರ್ಯಾ ಶಠಂ ಮಿತ್ರಂ ಭೃತ್ಯುಶ್ಚೋತ್ತರದಾಯಕಃ |**
**ಸಸರ್ಪೇ ಚ ಗೃಹೇ ವಾಸೋ ಮೃತ್ಯುರೇವ ನ ಸಂಶಯಃ ||**

"ಪತ್ನಿ ದುಷ್ಟಪ್ರವೃತ್ತಿಯವಳು, ಮಿತ್ರ ವಂಚಕ, ಆಳುಗಳೆಲ್ಲ ಹೇಳಿದ ಮಾತು ಕೇಳದೆ ಎದುರು ಉತ್ತರ ಕೊಡುತ್ತಾರೆ, ಇಷ್ಟೂ ಸಾಲದೆಂಬಂತೆ ಮನೆಯಲ್ಲಿ ಸರ್ಪ. ಇಂಥ ಮನೆಯಲ್ಲಿ ವಾಸಿಸುವುದೆಂದರೆ ಮೃತ್ಯುವೆಂಬುದರಲ್ಲಿ ಸಂಶಯವಿಲ್ಲ."

ಈ ಶ್ಲೋಕವನ್ನು ಯಾರೋ ಗಂಡಸು ಬರೆದಿರಬೇಕು. ಮಹಿಳೆಯೊಬ್ಬಳು ಬರೆದಿದ್ದರೆ ಬಹುಶಃ "ದುಷ್ಟಾ ಭಾರ್ಯಾ" ಬದಲು "ದುಷ್ಟೋ ಭರ್ತಾ" ಎಂದು ಸೇರಿಸುತ್ತಿದ್ದಳು. ಒಟ್ಟಿನಲ್ಲಿ ಕುಟುಂಬದಲ್ಲಿ ಪರಸ್ಪರ ಸಾಮರಸ್ಯವಿಲ್ಲದಿದ್ದರೆ ಅಂತಹ ಮನೆ ನರಕಸದೃಶವಾಗುತ್ತದೆ ಎಂಬುದನ್ನು ಈ ಶ್ಲೋಕ ತಿಳಿಸುತ್ತದೆ. ಒಬ್ಬ ವ್ಯಕ್ತಿ ಕುಟುಂಬ ಜೀವನವನ್ನು ಏಕೆ ಸ್ವೀಕರಿಸುತ್ತಾನೆ? ಅವನು ಒಂಟಿಯಾಗಿಯೇ ಏಕೆ ಜೀವಿಸಬಾರದು? ಅವನು ಸಂಸಾರವನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಿದರೂ ಯಾವು ದಾದರೂ ಮಠವನ್ನು ಸೇರುತ್ತಾನೆ. ಅಲ್ಲಿಯೂ ಅವನು ಸಂನ್ಯಾಸಿಗಳ ಒಂದು ಕುಟುಂಬದಲ್ಲಿ ವಾಸಿಸುತ್ತಾನೆ. ಎಲ್ಲೋ ಕೆಲವರು ಮಾತ್ರ ಜನಸಂಪರ್ಕದಿಂದ ದೂರವಿರುತ್ತಾರೆ ಅಷ್ಟೆ. ಉಳಿದ ಎಲ್ಲರಿಗೂ ಜನಸಂಪರ್ಕ ಆವಶ್ಯಕ—ಒಬ್ಬನಿಗೆ ಇನ್ನೊಬ್ಬನು ಬೇಕು. ಜಗಳವಾಡುವುದಕ್ಕಾದರೂ ಇನ್ನೊಬ್ಬರು ಬೇಕು! ಪ್ರೀತಿಪೂರ್ಣವಾದ ಸಂಬಂಧ ಸಾಧ್ಯವಾಗದಿದ್ದರೆ ದ್ವೇಷ ಅಸೂಯೆಗಳ ಮೂಲಕವಾಗಿಯಾದರೂ ಇತರರೊಡನೆ ಸಂಬಂಧ ಇಟ್ಟುಕೊಳ್ಳುತ್ತಾನೆ. ದ್ವೇಷ ನಿಜವಾಗಿಯೂಪ್ರೀತಿಯ ವಿಕೃತರೂಪ ಅಷ್ಟೆ.

ಒಬ್ಬ ವ್ಯಕ್ತಿಗೆ ಒಂದು ಕುಟುಂಬದೊಡನೆ ಅಥವಾ ಒಂದು ಸಂಸ್ಥೆಯೊಡನೆ ಅಥವಾ ತಾನು ಮಾಡುವ ಕಾರ್ಯಕ್ಷೇತ್ರದೊಡನೆ ಸರಿಯಾದ, ಅರ್ಥಪೂರ್ಣವಾದ, ಆರೋಗ್ಯಕರವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಅಸಾಧ್ಯವಾದಾಗ ದ್ವೇಷ ಅಸೂಯಾದಿ ನಿಷೇಧಾತ್ಮಕ ಭಾವಗಳು ಉದ್ಭವಿಸುತ್ತವೆ. ಇವು ಕುಟುಂಬ ಅಥವಾ ಸಂಸ್ಥೆಯ ವಾತಾವರಣವನ್ನು ಕೆಡಿಸಿ ಯಾರೂ ನೆಮ್ಮದಿಯಿಂದ ಇರಲಾಗದ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ವ್ಯಕ್ತಿಗೆ ಇತರರೊಡನೆ ಅಥವಾ ಸಂಸ್ಥೆಯೊಡನೆ ತನ್ನನ್ನು ಸಂಬಂಧಿಸಿಕೊಳ್ಳಲು ಸಾಧ್ಯವಾಗದಿದ್ದಾಗ ಅವನು ತನ್ನದೇ ಆದ ಒಂದು ಸುರಕ್ಷಿತ ಪರಿಧಿಯನ್ನು ನಿರ್ಮಿಸಿಕೊಳ್ಳುತ್ತಾನೆ. (ಸ್ವಾಮಿಗಳಾದರೆ ತಮ್ಮ ಒಂದು ಭಕ್ತರ ವೃತ್ತವನ್ನು ನಿರ್ಮಿಸಿಕೊಳ್ಳುತ್ತಾರೆ.) ತನ್ನದೇ ವೈಯಕ್ತಿಕ ಅಸ್ತಿಯನ್ನು ಇಟ್ಟುಕೊಳ್ಳಲು ಮತ್ತು ಅದನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗೆ ಮಾಡುತ್ತ ಅವನು ಹೆಚ್ಚು ಹೆಚ್ಚು ಕುಟುಂಬದಿಂದ ಅಥವಾ ಸಂಸ್ಥೆಯಿಂದ ದೂರವಾಗುತ್ತಾ ಬರುತ್ತಾನೆ. ಈ ರೀತಿ ಸಂಸ್ಥೆ ಅಥವಾ ಕುಟುಂಬ ಒಡೆಯುತ್ತದೆ. ಸಂಸ್ಥೆ ಅಥವಾ ಕುಟುಂಬದ ಉದ್ದೇಶವೇ ಮುಖ್ಯವಾಗಿ ವ್ಯಕ್ತಿಗೆ ತನ್ನನ್ನು ತಾನು ಅರ್ಥಪೂರ್ಣವಾಗಿ ಸಂಬಂಧಿಸಿಕೊಳ್ಳಲು ಅವಕಾಶ ಮಾಡಿಕೊಡುವುದು. ಆ ಸಂಸ್ಥೆ ಮಾಡುವ ಸಮಾಜಕಾರ್ಯ ಇದಕ್ಕೆ ಪೂರಕವಾಗಿರಬೇಕೇ ಹೊರತು ಸದಸ್ಯರ ಈ ಮುಖ್ಯ ಆವಶ್ಯಕತೆಯನ್ನು ಕಡೆಗಣಿಸುವುದಕ್ಕೆ ಕಾರಣವಾಗಿರಬಾರದು. ಈ ರೀತಿ ಮಾಡಿದಾಗ ಸಮಾಜಕಾರ್ಯವೂ ಸರಿಯಾಗಿ ನೆರವೇರುವುದಿಲ್ಲ.

## ಹಿರಿಯರ ಪಾತ್ರ

ಆದ್ದರಿಂದ ಕುಟುಂಬದ ಮೂಲ ಉದ್ದೇಶವೇ ಪರಸ್ಪರ ಸಂಬಂಧಕ್ಕೆ ಅವಕಾಶ ಮಾಡಿ ಕೊಡುವುದು. ಈ ವಿಷಯದಲ್ಲಿ ಮನೆಯಲ್ಲಿರುವ ಹಿರಿಯರ ಪಾತ್ರ ತುಂಬ ಹಿರಿದಾದುದು. ಅವರು ಕಿರಿಯರೆಲ್ಲರೂ ತಮ್ಮನ್ನು ಕುಟುಂಬದೊಡನೆ ಸಂಬಂಧಿಸಿಕೊಳ್ಳಲು ಸಹಕರಿಸಬೇಕು.

ಬೇರೆ ಬೇರೆ ಸ್ವಭಾವದ ವ್ಯಕ್ತಿಗಳ ಆವಶ್ಯಕತೆ ಗಳಿಗನುಗುಣವಾಗಿ ಅವರ ಬೇಡಿಕೆಗಳನ್ನು ಪೂರೈಸುತ್ತ ಎಲ್ಲರೂ ಸಂತೃಪ್ತಿಯ ಜೀವನ ನಡೆಸುವಂತಾಗಬೇಕು. ಹಿರಿಯರು ತಮ್ಮ ಜೀವನಾದರ್ಶವನ್ನು ಇತರರ ಮೇಲೆ ಹೇರಲು ಪ್ರಯತ್ನಿಸಬಾರದು. ಮನೆಯಲ್ಲಿ ಸಂತೃಪ್ತಿಯ ವಾತಾವರಣವನ್ನು ಸೃಷ್ಟಿಸುವುದು ಮುಖ್ಯ. ಆನಂತರ ಸದಸ್ಯರೆಲ್ಲರೂ ದ್ವೇಷಾಸೂಯೆಗಳಿಲ್ಲದೆ ಹೆಚ್ಚು ನೀತಿವಂತರಾಗಿಯೇ ವರ್ತಿಸುತ್ತಾರೆ. ಈ ಸಂತೃಪ್ತಿ ಕೇವಲ ಭೌತಿಕ ಆವಶ್ಯಕತೆಗಳನ್ನು ಪೂರೈಸುವುದರಿಂದ ಉಂಟಾಗುವುದಿಲ್ಲ. ಭಾವನಾತ್ಮಕ ಆವಶ್ಯಕತೆಗಳ ಪೂರೈಕೆ ಅತ್ಯಂತ ಆವಶ್ಯಕ. ಇದಿದ್ದರೆ ತುಂಬ ಬಡ ಕುಟುಂಬದಲ್ಲಿಯೂ ನೆಮ್ಮದಿ ಇರುತ್ತದೆ. ಭಾವನಾತ್ಮಕ ವಾಗಿ ಈ ನೆಮ್ಮದಿ, ಸಂತೃಪ್ತಿ ದೊರೆಯದಿದ್ದಾಗ ಕುಟುಂಬದ ಸದಸ್ಯರು, ವಿಶೇಷವಾಗಿ ಕಿರಿಯರು, ವಿವಿಧ ಮನರಂಜನಾ ಕಾರ್ಯಕ್ರಮಗಳಿಗೆ ಬಲಿಯಾಗುತ್ತಾರೆ, ದುರ್ವ್ಯಸನಗಳಿಗೆ ವಶ ರಾಗುತ್ತಾರೆ ಮತ್ತು ಕುಟುಂಬದ ವಾತಾವರಣವನ್ನು ಕೆಡಿಸುತ್ತಾರೆ. ಆದ್ದರಿಂದ ಕುಟುಂಬ ನಿರ್ವಹಣೆ ಅತ್ಯಂತ ಗುರುತರವಾದುದು. ಶ್ರೀಮಾತೆ ಶಾರದಾದೇವಿಯವರು ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿದರು ಎಂಬುದನ್ನು ನೋಡೋಣ.

ಶ್ರೀಮಾತೆಯವರ ಜೀವನ ನದಿ ಅನೇಕ ಕಷ್ಟ-ಕೋಟಲೆಗಳು, ಸುಖ-ದುಃಖಗಳು, ಏರು-ಪೇರುಗಳು, ಅಳು-ನಗುಗಳು, ಸಂಪತ್ತು-ವಿಪತ್ತುಗಳು—ಇವೇ ಮುಂತಾದ ಬೆಟ್ಟ ಕಣಿವೆ ಕಾನನ ಬಯಲುಗಳ ಮೂಲಕ ಹರಿಯಿತು. ಆ ಪುಣ್ಯತೀರ್ಥದಲ್ಲಿ ಮಿಂದು ಪಾಪವನ್ನು ತೊಳೆದುಕೊಂಡವರು ಅನೇಕರು. ಅದರ ಅಮೃತವಾರಿಯನ್ನು ಕುಡಿದು ತೃಪ್ತರಾದವರು ಹಲವರು. ಅದು ಜುಳು-ಜುಳು ಎಂದು ಲಾಸ್ಯವಾಡುತ್ತ ಹರಿಯುವುದನ್ನು ಕೇವಲ ನೋಡಿ ಆನಂದಿಸಿದವರು ಮತ್ತನೇಕರು. ಅದರ ಸ್ವಚ್ಛ ಜಲದಲ್ಲಿ ತಮ್ಮ ಪ್ರತಿಬಿಂಬವನ್ನು ಕಂಡು ಸ್ವಸ್ವರೂಪಜ್ಞಾನವನ್ನು ಪಡೆದವರು ಮತ್ತೆಷ್ಟೋ. ಅದರ ಮೇಲಿಂದ ಬೀಸಿ ಬರುವ ತಂಗಾಳಿಯಿಂದ ಮನತಣಿಸಿಕೊಂಡವರೂ ಬಹುಮಂದಿ. ಅದು ತನ್ನ ಕಲ ಕಲ ನಿನಾದದಿಂದ ಎಲ್ಲರನ್ನೂ ತನ್ನ ಕಡೆ ಕರೆಯುವುದು, ಪ್ರೀತಿಯ ಸುಳಿಯಲ್ಲಿ ಎಲ್ಲರನ್ನೂ ಬರಸೆಳೆಯುವುದು, ಮಾತೃವಾತ್ಸಲ್ಯದ ಅಲೆಯಿಂದ ಎಲ್ಲರನ್ನೂ ಬಾಚಿ ತಬ್ಬಿಕೊಳ್ಳುವುದು. ಆದರೂ ಅದರ ಜಲವನ್ನು ಸಾಮಾನ್ಯ ನೀರಿನಂತೆ ಬಳಸಿಕೊಂಡವರ ಸಂಖ್ಯೆಗೂ ಕಡಿಮೆಯಿರಲಿಲ್ಲ.

ಈ ಪುಣ್ಯನದಿ ಎಂದೋ ರಭಸದಿಂದ ಓಡಿಹೋಗಿ ಸಮುದ್ರವನ್ನು ಸೇರಿಕೊಳ್ಳುವುದರಲ್ಲಿತ್ತು. ಆದರೆ ಶ್ರೀರಾಮಕೃಷ್ಣರು ಅದರ ಉಪಯೋಗ ಬಹುಜನರಿಗೆ ಆಗಲೆಂದು ಅದಕ್ಕೆ ಸಂಸಾರವೆಂಬ ಅಣೆಕಟ್ಟನ್ನು ಕಟ್ಟಿದರು. ಇದರಿಂದಾಗಿ ಈ ನದಿಯ ನೀರು ಅನೇಕ ಕಾಲುವೆಗಳ ಮೂಲಕ ಹರಿದುಹೋಗಿ ಅಸಂಖ್ಯ ವ್ಯಕ್ತಿಗಳ ಬರಡು ಜೀವನವನ್ನು ಹಸನಾಗಿಸಿತು.

### ಶ್ರೀಮಾತೆಯವರ ಸಂಸಾರ

ಶ್ರೀಮಾತೆಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಕೊಲ್ಕತದಲ್ಲಿ ಅವರಿಗಾಗಿ ಕಟ್ಟಿಸಿದ ಉದ್ಬೋಧನ ಮನೆಯಲ್ಲಿ ಆಗಾಗ ಸ್ವಲ್ಪಕಾಲ ತಮ್ಮ ಜೀವನವನ್ನು ಕಳೆಯುತ್ತಿದ್ದರು. ಆದರೆ ತಮ್ಮ ಹೆಚ್ಚು ಕಾಲವನ್ನು ಅವರು ಜಯರಾಂಬಾಟಿಯಲ್ಲಿ ಕಳೆಯುತ್ತಿದ್ದರು. ಹಳ್ಳಿಯ ಮುಕ್ತ ವಾತಾವರಣ ಅವರಿಗೆ ಮೆಚ್ಚಿಗೆಯಾಗುತ್ತಿತ್ತು. ಅಲ್ಲಿ ಅವರಿದ್ದ ಪೂರ್ವಿಕರ ಮನೆ ಒಂದು ಅವಿಭಕ್ತ ಕುಟುಂಬ. ಅಲ್ಲಿ ಅವರ ತಮ್ಮಂದಿರಾದ ಪ್ರಸನ್ನಕುಮಾರ, ಕಾಳಿಕುಮಾರ ಮತ್ತು ವರದಪ್ರಸಾದರೂ ಅವರ ಪತ್ನಿಯರಾದ ಸುವಾಸಿನಿ, ಸುಬೋಧಬಾಲಾ ಮತ್ತು ಇಂದುಮತಿಯರೂ ಹಾಗೂ ಅವರ ಮಕ್ಕಳಾದ ನಳಿನಿ, ಮಾಕು (ಸುಶೀಲಾ), ಕ್ಷುದೀರಾಮ ಮುಂತಾದವರೂ ಇದ್ದರು. ಶ್ರೀಮಾತೆಯವರ ಕೊನೆಯ ತಮ್ಮನಾದ ಅಭಯ ಚರಣನು ಅಕಾಲ ಮೃತ್ಯುವಿಗೆ ತುತ್ತಾಗಲು ಅವನ ಪತ್ನಿ ಸುರಬಾಲಾ ಮತ್ತು ಮಗಳು ರಾಧಾರಾಣಿ (ರಾಧು)ಇವರ ಜವಾಬ್ದಾರಿಯನ್ನೂ ಶ್ರೀಮಾತೆಯವರೇ ವಹಿಸಿಕೊಳ್ಳಬೇಕಾಯಿತು. ಪತಿಯ ಮೃತ್ಯುವಿನ ಆಘಾತದಿಂದಾಗಿ ಸುರಬಾಲಾಳ ತಲೆ ಕೆಟ್ಟಿತ್ತು. ರಾಧುವಿನ ಸ್ವಭಾವವೂ ಒಳ್ಳೆಯದಿರಲಿಲ್ಲ. ಇವರಿಬ್ಬರೂ ಶ್ರೀಮಾತೆಯವರಿಗೆ ಅಸಾಧ್ಯ ಹಿಂಸೆಯನ್ನು ನೀಡುತ್ತಿದ್ದರು.

ಶ್ರೀಮಾತೆಯವರ ತಾಯಿ ೧೯೦೬ರಲ್ಲಿ ನಿಧನರಾದನಂತರ ಅವರೇ ಮನೆಯಲ್ಲಿ ಎಲ್ಲರಿಗಿಂತ ಹಿರಿಯರು—ಅವರೇ ಹಿರಿಯಕ್ಕ. "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ" ಎಂಬ ಗಾದೆಯಿದ್ದರೂ ಅವರ ಆಧ್ಯಾತ್ಮಿಕ "ಚಾಳಿ"ಯನ್ನು ಉಳಿದವರಾರೂ ಮೈಗೂಡಿಸಿಕೊಳ್ಳಲಿಲ್ಲ. ಶ್ರೀಮಾತೆಯವರು ತಮ್ಮ ಆದರ್ಶವನ್ನು ಇತರರ ಮೇಲೆ ಹೇರಲಿಲ್ಲ. ಅವರವರ ಪ್ರಕೃತಿಗನುಗುಣವಾಗಿ ಅವರು ಬೆಳೆಯಲು ಬಿಟ್ಟರು.

ಅವರ ಸಹೋದರರಿಗೆ ಹಣದ ವ್ಯಾಮೋಹ. ಶ್ರೀಮಾತೆಯವರಿಗೆ ಅವರ ಭಕ್ತರು ಕೊಡುವ ಕಾಣಿಕೆಯ ಮೇಲೆಯೇ ಅವರ ಕಣ್ಣು. ಅಕ್ಕನನ್ನು ಹಣಕ್ಕಾಗಿ ಯಾವಾಗಲೂ ಕಾಡುತ್ತಿದ್ದರು. ಶ್ರೀಮಾತೆಯವರೇ ಒಮ್ಮೆ ಹೇಳುತ್ತಾರೆ: "ಕಾಳಿ (ಕಾಳಿಕುಮಾರ)ಗೆ ಹಣದ ಹುಚ್ಚು. ಅನ್ನದ ಸಮಸ್ಯೆ ಮೂರ್ಖನನ್ನೂ ಜಾಣನನ್ನಾಗಿಸುವುದು. ಅಕ್ಕನನ್ನು ದುಡ್ಡಿನ ಗಿಡ ಎಂದು ತಿಳಿದುಬಿಟ್ಟಿದ್ದಾನೆ. ಆದರೂ ಸ್ವಲ್ಪ ಭಕ್ತಿ ಶ್ರದ್ಧೆ ಇದೆ. ಆಪತ್ತು ವಿಪತ್ತುಗಳಲ್ಲಿ ಅಕ್ಕನಿಗೆ ಬೆಂಬಲವಾಗಿ ನಿಲ್ಲುತ್ತಾನೆ. ಉಳಿದವರು ಕೇವಲ ಸುಲಿಯುವುದೊಂದೇ." ಇಂತಹ ಸಹೋದರರೊಡನೆ ಅವರು ಬಾಳಬೇಕಾಗಿತ್ತು. ಆದರೂ ಅವರು ಅಸಮಾಧಾನಗೊಳ್ಳುತ್ತಿರಲಿಲ್ಲ. ಆ ಸಹೋದರರು ಆಗಾಗ ತಮ್ಮತಮ್ಮಲ್ಲಿ ಜಗಳ ಕಾಯುತ್ತಿದ್ದರು. ಶ್ರೀಮಾತೆಯವರು ಮಧ್ಯಸ್ಥಿಕೆ ವಹಿಸಿ ಅವರನ್ನು ಸಮಾಧಾನ ಮಾಡಬೇಕಾಗುತ್ತಿತ್ತು. ಅವರವರಲ್ಲಿ ಎಷ್ಟೇ ಪರಸ್ಪರ ವೈಮನಸ್ಯವಿದ್ದರೂ ಅವರು ಎಷ್ಟೇ ಸ್ವಾರ್ಥಪರರಾದರೂ ಅವರು ಶ್ರೀಮಾತೆಯವರನ್ನು ಎಂದೂ ದ್ವೇಷಿಸುತ್ತಿರಲಿಲ್ಲ. ಅಷ್ಟೇ ಅಲ್ಲದೆ ಅವರನ್ನು ಗೌರವದಿಂದಲೇ ಕಾಣುತ್ತಿದ್ದರು. ಇದು ಶ್ರೀಮಾತೆಯವರು ಎಷ್ಟು ಪ್ರೇಮಮಯಿ ಎಂಬುದನ್ನು ಸೂಚಿಸುತ್ತದೆ.

**ಕುಟುಂಬದಲ್ಲಿ ಎಲ್ಲವನ್ನೂ ನಿರ್ವಹಿಸುವವರಿಗೆ ನಿರ್ಲಿಪ್ತತೆ ಅತ್ಯಂತ ಆವಶ್ಯಕ.**

### ಶ್ರೀಮಾತೆಯವರ ನಿರ್ಲಿಪ್ತತೆ

ಅವರು ಸಂಸಾರದಲ್ಲಿದ್ದರೂ ಸಂಪೂರ್ಣ ನಿರ್ಲಿಪ್ತರಾಗಿದ್ದರು. ಯಾವುದೇ ವ್ಯಕ್ತಿಯ ಬಗ್ಗೆಯಾಗಲಿ, ವಸ್ತುವಿನ ಬಗ್ಗೆಯಾಗಲಿ, ಅವರಿಗೆ ವ್ಯಾಮೋಹ ಇರಲಿಲ್ಲ. ಇದು ಅವರು ಎಲ್ಲರ ಗೌರವಕ್ಕೂ ಪಾತ್ರರಾಗುವಂತೆ ಮಾಡಿತು. ಕುಟುಂಬದಲ್ಲಿ ಎಲ್ಲವನ್ನೂ ನಿರ್ವಹಿಸುವವರಿಗೆ ಈ ನಿರ್ಲಿಪ್ತತೆ ಅತ್ಯಂತ ಆವಶ್ಯಕ. ಶ್ರೀಮಾತೆಯವರ ಎಲ್ಲ ಗೃಹಕೃತ್ಯದ ಹಿಂದಿದ್ದ ಅನಾಸಕ್ತಿ ಸೂಕ್ಷ್ಮದೃಷ್ಟಿಗೆ ಗೋಚರವಾಗದೆ ಇರುತ್ತಿರಲಿಲ್ಲ. ಅವರು ಎಲ್ಲ ಕೆಲಸ ಮಾಡುತ್ತಿದ್ದರು, ಸಂಸಾರದ ದುಃಖವನ್ನು ಅನುಭವಿಸುತ್ತಿದ್ದರು,

ಕೋಪ-ತಾಪಕ್ಕೆ ಒಳಗಾಗುತ್ತಿದ್ದರು. ಆದರೂ ಕ್ಷಣಮಾತ್ರದಲ್ಲಿ ಇವನ್ನೆಲ್ಲ ಮರೆತುಬಿಡುವ ನಿರ್ಲಿಪ್ತತೆ ಅವರದಾಗಿತ್ತು.

ಒಮ್ಮೆ ಅವರ ಸಹೋದರರಾದ ಕಾಳಿ ಮತ್ತು ವರದ ಮನೆಯ ಮುಂದೆ ಜೋರಾಗಿ ಜಗಳ ಕಾಯುತ್ತಿದ್ದರು. ಇನ್ನೇನು ಹೊಡೆತ-ಬಡಿತ ಆಗುವುದರಲ್ಲಿತ್ತು. ಶ್ರೀಮಾತೆಯವರು ವರಾಂಡದಲ್ಲಿ ಕುಳಿತು ಸಂನ್ಯಾಸಿಗಳೊಡನೆ ಆಧ್ಯಾತ್ಮಿಕ ವಿಷಯವನ್ನು ಕುರಿತು ಮಾತನಾಡುತ್ತಿದ್ದರು. ಕೂಡಲೇ ಎದ್ದುಹೋಗಿ ಅವರಿಬ್ಬರನ್ನು ಚೆನ್ನಾಗಿ ಗದರಿಸಿ ಜಗಳ ನಿಲ್ಲಿಸಿದರು. ಶ್ರೀಮಾತೆಯವರು ತುಂಬ ಉದ್ವಿಗ್ನರಾಗಿದ್ದರು. ಹಾಗೆಯೇ ಬಂದು ವರಾಂಡದಲ್ಲಿ ಕುಳಿತರು. ಕ್ಷಣಾರ್ಧದಲ್ಲಿ ಅವರ ಕೋಪವೆಲ್ಲ ಎಲ್ಲೋ ಮಾಯವಾಯಿತು. ಈ ಪ್ರಪಂಚದಲ್ಲಿ ದಿನ ನಿತ್ಯವೂ ನಡೆಯುತ್ತಿರುವ ಭಗವಂತನ ಲೀಲಾನಾಟಕವನ್ನು ಸಾಕ್ಷಿಯಂತೆ ನೋಡಿ ಆನಂದಿಸುವವರ ಅಪೂರ್ವ ಪ್ರಶಾಂತತೆ ಅವರ ಮುಖದಲ್ಲಿ ತಾಂಡವವಾಡುತ್ತಿತ್ತು. "ಈ ಮಾಯೆಯ ಆಟ ಎಷ್ಟು ವಿಚಿತ್ರವಾಗಿದೆ! ಭೂಮಿ ಅನಂತವಾಗಿದೆ. ಈ ಎಲ್ಲ ಸಂಪತ್ತೂ ಹಿಂದೆ ಉಳಿಯುವುದು. ಇಷ್ಟನ್ನೂ ಮನುಷ್ಯ ಅರ್ಥಮಾಡಿಕೊಳ್ಳಲಾರನಲ್ಲ!" ಎಂದು ಹೇಳಿ ಗಹಗಹಿಸಿ ನಕ್ಕರು ಶ್ರೀಮಾತೆಯವರು.

ಅವರ ಈ ಮಾತಿನಲ್ಲಿ ಜನರ ಬಗ್ಗೆ ಕನಿಕರ ಮತ್ತು ಆ ನಗೆಯಲ್ಲಿ ಎಲ್ಲವನ್ನೂ ನಾಟಕದಂತೆ ಕಾಣುವ ನಿರ್ಲಿಪ್ತತೆ ಎದ್ದು ಕಾಣುತ್ತವೆ. ಇದು ಶ್ರೀಮಾತೆಯವರ ವೈಶಿಷ್ಟ್ಯ. ಜಗತ್ತಿನ ನಶ್ವರತೆ ಅವರನ್ನು ನಿರಾಶಾವಾದಿಗಳನ್ನಾಗಿ ಮಾಡಲಿಲ್ಲ, ಜೀವನವಿರೋಧಿಗಳನ್ನಾಗಿ ಮಾಡಲಿಲ್ಲ. ಸಂಸಾರದ ನಶ್ವರತೆ ನಮ್ಮನ್ನು ನಿರ್ಲಿಪ್ತರನ್ನಾಗಿ ಮಾಡಬೇಕು, ಖಿನ್ನರನ್ನಾಗಿ ಮಾಡಬಾರದು. ಆಗ ಈ ಸಂಸಾರ ಸುಖಮಯವಾಗುತ್ತದೆ. ಇವೆಲ್ಲ ನಶ್ವರವಾಗಿರುವುದೇ ಒಂದು ದೊಡ್ಡ ಭಾಗ್ಯ.

ಈ ಸಂಸಾರ ಶಾಶ್ವತವಾಗಿ ನಮ್ಮೊಂದಿಗೆ ಇರುವುದಾಗಿದ್ದರೆ, ಈ ವಿಷಯಸುಖಗಳನ್ನೆಲ್ಲ ನಿರಂತರವಾಗಿ, ಶಾಶ್ವತವಾಗಿ ನಾವು ಅನುಭವಿಸಬೇಕಾಗಿದ್ದಿದ್ದರೆ, ಆಗ ಜೀವನವೆಷ್ಟು ಅಸಹನೀಯವಾಗಿಬಿಡುತ್ತಿತ್ತು! ಈ ವೈವಿಧ್ಯವೇ ನಮಗೆ ನಿಜವಾಗಿ ಸುಖವನ್ನು ನೀಡುವಂತಹುದು. ಒಂದು ನಾಟಕದಲ್ಲಿ ಮೊದಲಿನಿಂದ ಕೊನೆಯವರೆಗೆ ಒಂದೇ ದೃಶ್ಯವನ್ನು ನೋಡಬೇಕಾದರೆ—ಅದು ಸುಖಮಯವೇ ಆಗಿದ್ದರೂ—ನಮಗೆ ಸಹಿಸಲಾಗುವುದಿಲ್ಲ. ಹಾಗೆಯೇ ಈ ಜೀವನ ನಾಟಕವೂ ವೈವಿಧ್ಯಮಯವಾಗಿರಬೇಕು—ನವರಸಗಳಿಂದ ಕೂಡಿರಬೇಕು. ಆಗಲೇ ಅದರ ಸ್ವಾರಸ್ಯ. ಆದರೆ ಅದು ಸಮರಸವಾಗಿರಬೇಕು. ಕೊನೆಯ "ಸ" ವನ್ನು ತೆಗೆದುಬಿಟ್ಟರೆ, ಅಂದರೆ ಸಕಾರಾತ್ಮಕ ಭಾವ (positive attitude) ಇಲ್ಲದಿದ್ದರೆ, ನಿಷೇಧಾತ್ಮಕ ಭಾವವಿದ್ದರೆ, ಕುಟುಂಬ "ಸಮರ" ಭೂಮಿಯಾಗುತ್ತದೆ.

## ಅಸಾಮಾನ್ಯ ಸಾಮಾನ್ಯತೆ

ಶ್ರೀಮಾತೆಯವರ ಸಂಸಾರದ ಇತರ ಸದಸ್ಯರೂ ವಿಭಿನ್ನ ಪ್ರಕೃತಿಯವರು. ಅವರಲ್ಲಿ ಕೆಲವರಿಗೆ ಸ್ವಲ್ಪ ಧಾರ್ಮಿಕತೆಯಿದ್ದರೂ ಯಾರೂ ಶ್ರೀಮಾತೆಯವರ ಆಧ್ಯಾತ್ಮಿಕ ಆದರ್ಶಕ್ಕೆ ಸ್ಪಂದಿಸಲಿಲ್ಲ. ಆದರೂ ಶ್ರೀಮಾತೆಯವರು ಅವರನ್ನೆಲ್ಲ ಪ್ರಾಪಂಚಿಕರು ಎಂದು ತುಚ್ಛವಾಗಿ ಕಾಣಲಿಲ್ಲ. ಅವರವರ ಮನೋಧರ್ಮಕ್ಕೆ ಅನುಗುಣವಾಗಿ ಅವರೊಡನೆ ವರ್ತಿಸುತ್ತಿದ್ದರು. ಅವರ ಪ್ರಾಪಂಚಿಕ ಬೇಡಿಕೆಗಳನ್ನೆಲ್ಲ ಕುಟುಂಬದ ವರಮಾನಕ್ಕೆ ಅನುಸಾರವಾಗಿ ನೆರವೇರಿಸುತ್ತಿದ್ದರು. ವಿಶೇಷ ಹಬ್ಬದ ದಿನಗಳಲ್ಲಿ ಹೊಸ ಬಟ್ಟೆ ಮುಂತಾದ ಉಡುಗೊರೆಗಳನ್ನು ನೀಡಬೇಕು; ಸಂಬಂಧಿಕರನ್ನು ಮನೆಗೆ ಕರೆಸಬೇಕು; ವಿಶೇಷ ಹಬ್ಬದಡುಗೆಯನ್ನು ಸಿದ್ಧಪಡಿಸಬೇಕು. ಹೀಗೆ ಕುಟುಂಬಕ್ಕೆ ಸಂಬಂಧಿಸಿದ ಹತ್ತುಹಲವು ವಿಧಿವಿಧಾನಗಳನ್ನು ಅವರು ತಪ್ಪದೆ ಪಾಲಿಸುತ್ತಿದ್ದರು. ಸಂಸಾರದ ಲೇಪವೇ ಇಲ್ಲದ, ಯಾವಾಗಲೂ ಭಗವಂತನಲ್ಲೇ ಲೀನವಾದ ಮನಸ್ಸುಳ್ಳ ಅವರು ಇಂತಹ ಸಾಮಾನ್ಯ ಸಾಂಸಾರಿಕ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಸ್ವಾಮಿ ಪ್ರೇಮಾನಂದರು ಅವರ ಬಗ್ಗೆ ಹೀಗೆ ಹೇಳುತ್ತಾರೆ:

"ಇಡೀ ಜಗನ್ನಾಟಕದ ಸೂತ್ರಧಾರಿಣಿಯಾದ ಜಗನ್ಮಾತೆ ಒಬ್ಬ ಸಾಮಾನ್ಯ ಬಡ ಹೆಂಗಸಿನ ರೂಪದಲ್ಲಿ ಬಂದು ನೆಲಕ್ಕೆ ಸಗಣಿ ಸಾರಿಸುವುದು, ಪಾತ್ರೆ ತಿಕ್ಕುವುದು, ಬತ್ತ ಕುಟ್ಟುವುದು, ಭಕ್ತರ ಎಂಜಲೆಲೆ ತೆಗೆಯುವುದು—ಈ ಬಗೆಯ ಕೆಲಸಕಾರ್ಯಗಳನ್ನೆಲ್ಲ ಮಾಡುತ್ತಿರುವುದನ್ನು ನೀವೆಲ್ಲ ನೋಡಿಯೇ ಇದ್ದೀರಿ. ಅವರು ಈ ರೀತಿ ಪರಿಶ್ರಮ ಪಡುತ್ತಿರುವುದು ಗೃಹಸ್ಥರಿಗೆ ಅವರ ಗೃಹಸ್ಥ ಧರ್ಮವನ್ನು ಕಲಿಸಿಕೊಡುವುದಕ್ಕಾಗಿ. ಎಂತಹ ಅಪರಿಮಿತ ಸಹನೆ, ಅಪಾರ ಕರುಣೆ! ಎಂಥ ನಿರಭಿಮಾನ!"

ಶ್ರೀಮಾತೆಯವರನ್ನು ಅನೇಕ ಭಕ್ತರು ಬಂದು "ದೇವಿ" ಎಂದು ಆರಾಧಿಸುತ್ತಿದ್ದರು, ಗುರುವೆಂದು ಗೌರವಿಸಿ ಅವರ ಉಪದೇಶಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಆದರೆ ಅವರ ಕುಟುಂಬದವರಿಗೆ ಮತ್ತು ಹಳ್ಳಿಯವರಿಗೆ ಅವರು ಒಬ್ಬ ಸಾಮಾನ್ಯ ಮಹಿಳೆ. ನಳಿನಿ, ರಾಧು ಮುಂತಾದ ಅವರ ಸೋದರಸೊಸೆಯಂದಿರು ಅವರಿಗೆ ತುಂಬ ಹಿಂಸೆ ಕೊಡುತ್ತಿದ್ದರು—ಬೈಯುವುದು, ಹೊಡೆಯುವುದು, ಒದೆಯುವುದು ಮೊದಲುಗೊಂಡು. ಇವನ್ನೆಲ್ಲ ಸಹಿಸಿಕೊಂಡು ಅವರನ್ನು ಹರಸುತ್ತಿದ್ದರು. ಇನ್ನೊಂದು ಕಡೆ ಅವರನ್ನು ಭಕ್ತರು ದೇವಿಯಂತೆ ಪೂಜಿಸುತ್ತಿದ್ದರು. ಭಕ್ತರು ಅವರಿಗೆ ತೋರಿಸುತ್ತಿದ್ದ ಭಕ್ತಿಯನ್ನು ನೋಡಿ ಅವರ ಸಂಬಂಧಿಕರಿಗೆ ಆಶ್ಚರ್ಯವಾಗುತ್ತಿತ್ತು. ಹಳ್ಳಿಯವರಿಗೂ ಇದು ಅರ್ಥವಾಗುತ್ತಿರಲಿಲ್ಲ. "ಭಕ್ತರು ನಿಮ್ಮನ್ನು ಇಷ್ಟೊಂದು ಗೌರವಿಸುತ್ತಾರಲ್ಲ, ನಿಮ್ಮಲ್ಲಿ ಅವರು ಏನನ್ನು ಕಾಣುತ್ತಾರೊ. ನಮಗೆ ನಿಮ್ಮಲ್ಲಿ ಯಾವ ವಿಶೇಷವೂ ಕಾಣುತ್ತಿಲ್ಲ" ಎಂದು ಹಳ್ಳಿಯವರು ಹೇಳಿದಾಗ ಶ್ರೀಮಾತೆಯವರು, "ನನ್ನಲ್ಲಿ ಏನು ವಿಶೇಷವಿದೆ? ನಾನು ಯಾರು? ನಿಮ್ಮ ಶಾರದೆ, ಅಷ್ಟೆ" ಎಂದು ಆತ್ಮೀಯತೆಯಿಂದ ನುಡಿಯುತ್ತಿದ್ದರು.

ಸಾಧುಭಿಃ ಪೂಜ್ಯಮಾನೇಽಸ್ಮಿನ್ ಪೀಡ್ಯಮಾನೇಽಪಿ ದುರ್ಜನೈಃ |
ಸಮಭಾವೋ ಭವೇದ್ಯಸ್ಯ ಸ ಜೀವನ್ಮುಕ್ತ ಇಷ್ಯತೇ || ( ವಿವೇಕಚೂಡಾಮಣಿ :೪೩೯)

"ಸಾಧುಗಳು ಅವನನ್ನು ಗೌರವಿಸಲಿ ಅಥವಾ ದುಷ್ಟರು ಪೀಡಿಸಲಿ, ಯಾವನಿಗೆ ಸಮಭಾವವಿರುವುದೋ ಅವನು ಜೀವನ್ಮುಕ್ತ ಎನಿಸುವನು."

## ಕುಟುಂಬ ನಿರ್ವಹಣೆಯ ರಹಸ್ಯ

ಕುಟುಂಬದಲ್ಲಿ ಎಲ್ಲರಿಗೂ ಮಾನ್ಯತೆಯನ್ನು ನೀಡಬೇಕು. ಇಲ್ಲದಿದ್ದರೆ ಅವರು ಕುಟುಂಬದೊಡನೆ ಒಂದಾಗುವುದಿಲ್ಲ. ತಾನು ಈ ಕುಟುಂಬಕ್ಕೆ ಸೇರಿದವನು ಎಂದು ಕುಟುಂಬದ ಸದಸ್ಯರೆಲ್ಲರಿಗೂ ಅನಿಸುವಂತಾಗಬೇಕು. ಈ ಆವಶ್ಯಕತೆಯನ್ನು ಶ್ರೀಮಾತೆಯವರು ಬಹಳ ಚೆನ್ನಾಗಿ ಮನಗಂಡಿದ್ದರು. ಅವರೇ ಹೇಳುತ್ತಾರೆ : "ನೋಡು, ಎಲ್ಲರಿಗೂ ಸ್ವಲ್ಪ ಸ್ವಲ್ಪ ಅಧಿಕಾರ ಕೊಟ್ಟು ನಾವು ಸ್ವಲ್ಪ ತಗ್ಗಿ ನಡೆಯಬೇಕು. ನಾನು ಈ ಜಂಬದ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಅವರ ಮನೋಭಾವವನ್ನು ನೋಡಿ ಬಹಳ ಎಚ್ಚರಿಕೆಯಿಂದ ವರ್ತಿಸುತ್ತೇನೆ. ಆದರೂ ಆಗಾಗ ಜಗಳ ಕಾಯುತ್ತಾರೆ. ನಾನೇನು ಮಾಡಲಿ? ಭಗವಂತನ ಸಂಸಾರ, ಅವನು ನೋಡಿಕೊಳ್ಳುತ್ತಾನೆ—ಎಂದು ಭಾವಿಸುತ್ತೇನೆ."

ಶ್ರೀಮಾತೆಯವರು ಎಲ್ಲ ಮಕ್ಕಳಿಗೂ ಅವರವರಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿ ಉಣಿಸುತ್ತಿದ್ದರು. ಪ್ರಸನ್ನ ಕುಮಾರನ ಮೊದಲನೆಯ ಪತ್ನಿ ಇಂದುಮತಿಯ ಮಗ ಕ್ಷುದಿರಾಂ. ಅವನು ಇನ್ನೂ ಮಗುವಾಗಿದ್ದಾಗ ಶ್ರೀಮಾತೆಯವರು ಅವನಿಗೆ ಹಾಲು ಅನ್ನ ಬೆರಸಿ ಉಣಿಸುತ್ತಿದ್ದರು. ಇಂದುಮತಿ, "ಅಷ್ಟೊಂದು ಒಳ್ಳೆಯ ವಸ್ತುಗಳನ್ನು ತಿನ್ನಿಸುವುದು ಸರಿಯಲ್ಲ. ಈ ಬಡ ಕುಟುಂಬದಲ್ಲಿ ಯಾವಾಗಲೂ ಅದು ಅವನಿಗೆ ಸಿಗುವುದೇ?" ಎಂದು ಆಕ್ಷೇಪಿಸುತ್ತಿದ್ದಳು. ಶ್ರೀಮಾತೆಯವರು, "ನಿನಗೇನು ಗೊತ್ತಮ್ಮ? 'ಪಾಲುಣ್ಣುವವರಿಗದನೊದಗಿಸುವ ಲೋಕಪಾಲ'" ಎಂದು ಉತ್ತರಿಸುತ್ತಿದ್ದರು.

ಸಂಸಾರದಲ್ಲಿ ಸುಖ-ದುಃಖ, ಏರು-ಪೇರುಗಳು ಇದ್ದದ್ದೇ. ಇವೆಲ್ಲದರ ಮಧ್ಯೆ ಎಲ್ಲರೊಡನೆ ಹೊಂದಿಕೊಂಡು ಎಲ್ಲರಿಗೂ ಆನಂದವನ್ನು ನೀಡಲು ಶ್ರೀಮಾತೆಯವರು ಪ್ರಯತ್ನಿಸಿದರು. ಮನೆಯಲ್ಲಿ ಪ್ರೀತಿಯ ವಾತಾವರಣವನ್ನು ಕಲ್ಪಿಸಲು ಅವರು ನಿರಂತರ ಪ್ರಯತ್ನಿಸುತ್ತಿದ್ದರು. ಆದರೂ ಈ ಪ್ರಯತ್ನವನ್ನು ತಡೆಯುವ ಎಷ್ಟೋ ವಿರುದ್ಧ ಶಕ್ತಿಗಳಿದ್ದವು. ಸಹೋದರರ ಸ್ವಾರ್ಥ, ಸೋದರಸೊಸೆಯರ ಪರಸ್ಪರ ಅಸೂಯೆ, ನಳಿನಿಯ ಅಸಂಬದ್ಧ ಮಡಿ-ಮೈಲಿಗೆಯ ಗೀಳು, ರಾಧುವಿನ ತಿಳಿಗೇಡಿತನ, ಸುರಬಾಲಾಳ ಬುದ್ಧಿಭ್ರಮಣೆ ಇವೆಲ್ಲ ಸೇರಿ ಮನೆಯಲ್ಲಿ ಅಶಾಂತಿಯ ವಾತಾವರಣವನ್ನು ಉಂಟುಮಾಡುತ್ತಿದ್ದರೂ ಶ್ರೀಮಾತೆಯವರು ತಮ್ಮ ಅಸಾಧ್ಯ ತಾಳ್ಮೆಯಿಂದ ಎಲ್ಲವನ್ನೂ ಸಹಿಸಿಕೊಂಡು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದುದು ಅವರ ವ್ಯಕ್ತಿತ್ವದ ಒಂದು ವೈಶಿಷ್ಟ್ಯ.

## ಅತಿಥಿ ಸತ್ಕಾರ

ಕುಟುಂಬದವರನ್ನು ನಿಭಾಯಿಸುವುದು ಒಂದು ದೊಡ್ಡ ಸಾಹಸವಾದರೆ ವಿಭಿನ್ನ ಪ್ರಕೃತಿಯ ಅತಿಥಿಗಳನ್ನು ನಿಭಾಯಿಸುವುದೂ ಅಷ್ಟೇ ಸಹಾಸ. ಅತಿಥಿ ಸತ್ಕಾರ ಕುಟುಂಬದ ಅತಿ ಮುಖ್ಯ ಅಂಶ. ಇದರಿಂದ ಸಮಾಜದಲ್ಲಿ ಪರಸ್ಪರ ವಿಶ್ವಾಸ ಮತ್ತು ಆತ್ಮೀಯತೆ ಬೆಳೆಯುತ್ತದೆ. ಶ್ರೀಮಾತೆಯವರ ಬಳಗವಂತೂ ಅತಿ ದೊಡ್ಡದು. ಅವರ ಹತ್ತಿರದ ಮತ್ತು ದೂರದ ಸಂಬಂಧಿಕರು, ನೆರೆಹೊರೆಯವರು ಮಾತ್ರವಲ್ಲದೆ ಅವರ ಭಕ್ತರದೇ ಒಂದು ದೊಡ್ಡ ಬಳಗವಿತ್ತು. ಭಕ್ತರಿಗೆ ಸಮಯ ಅಸಮಯ ಇರುತ್ತಿರಲಿಲ್ಲ. ದೂರದಿಂದ ಹತ್ತಿರದಿಂದ ಯಾವಾಗಲೆಂದರೆ ಆವಾಗ ಬಂದುಬಿಡುತ್ತಿದ್ದರು. ಶ್ರೀಮಾತೆಯವರು ಅವರನ್ನೆಲ್ಲ ಉಪಚರಿಸಬೇಕಾಗುತ್ತಿತ್ತು. ಕೆಲವೊಮ್ಮೆ ರಾತ್ರಿ ಎರಡು ಅಥವಾ ಮೂರು ಗಂಟೆಗೇ ಬಂದು ಅವರನ್ನು ಎಬ್ಬಿಸುತ್ತಿದ್ದರು. ಹಗಲಿನ ಬಿಸಿಲಿನ ಬೇಗೆಯನ್ನು ತಾಳಲಾರದೆ ರಾತ್ರಿಯಾದ ಮೇಲೆ ಪ್ರಯಾಣ ಹೊರಟು ಅವರು ಹೀಗೆ ಬೆಳಗಿನ ಜಾವ ಬಂದುಬಿಡುತ್ತಿದ್ದರು. ಶ್ರೀಮಾತೆಯವರು ಅವರನ್ನು ಬರಮಾಡಿಕೊಂಡು ಆಹಾರವಿತ್ತು ವಿಶ್ರಾಂತಿಗೆ ಕಳಿಸುತ್ತಿದ್ದರು. ಕೊಲ್ಕತಾದಿಂದ ಬರುವ ಕೆಲವು ಭಕ್ತರಿಗೆ ಬೆಳಿಗ್ಗೆ ಎದ್ದ ಕೂಡಲೇ ಟೀ ಕುಡಿಯುವ ಅಭ್ಯಾಸ. ಶ್ರೀಮಾತೆಯವರೇ ಬೆಳಗಿನ ಜಾವ ಎದ್ದು, ತಮ್ಮ ಕಾಲುನೋವನ್ನು ಸಹಿಸಿಕೊಂಡು, ಊರೊಳಗೆ ಓಡಾಡಿ ಎಲ್ಲಿಂದಲಾದರೂ ಹಾಲನ್ನು ತೆಗೆದುಕೊಂಡು ಬಂದು ಅವರಿಗೆ ಟೀ ಮಾಡಿಕೊಡುತ್ತಿದ್ದರು. ತಮ್ಮ ಕಷ್ಟವನ್ನೂ ಪರಿಗಣಿಸದೆ ಭಕ್ತರ ಸೇವೆಯಲ್ಲಿ ಅಷ್ಟೊಂದು ಆಸಕ್ತಿ ತೋರಿಸುತ್ತಿದ್ದರು.

ಅವರ ಕುಟುಂಬ ಕೇವಲ ಮನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಸುತ್ತಲಿನ ಊರಿನವರು, ಎಲ್ಲ ಜಾತಿಯವರು, ಆ ಹಳ್ಳಿಯಲ್ಲಿದ್ದ ದರೋಡೆಕೋರರೂ ಕೂಡ, ಅವರನ್ನು "ಅಮ್ಮ" ಎಂದು ಕರೆದು ಬರುತ್ತಿದ್ದ ದೇಶವಿದೇಶದ ಭಕ್ತರು—ಎಲ್ಲರೂ ಅವರ ಕುಟುಂಬದ ಬಳಗಕ್ಕೆ ಸೇರಿದವರಾಗಿದ್ದರು. "ಆ ಮಾತೃಹೃದಯದಲ್ಲಿ ಎಲ್ಲರಿಗೂ ಸ್ಥಾನವಿತ್ತು. ಸ್ತ್ರೀ ಗರ್ಭದಿಂದ ಹುಟ್ಟಿದ ಪ್ರತಿಯೊಂದು ಮಗುವನ್ನೂ ಪ್ರೀತಿಯ ಮಡಿಲಲ್ಲಿ ಎತ್ತಿಕೊಳ್ಳುವ ತಾಯೊಡಲು ಅವರದು. ಮಾನವ ಜನಾಂಗವೇ ಅವರ ಕುಟುಂಬ" ಎಂದು ಹೇಳುತ್ತಾರೆ ಅಮೆರಿಕದ ಭಕ್ತೆ ಸೋದರಿ ದೇವಮಾತಾ.